

# ಸಮಸ್ಯೆಯೇ ಇಲ್ಲ, ಇಂಡಸ್ಟ್ರಿ ಚೆನ್ನಾಗಿದೆ..!

'ಇವತ್ತು ಕನ್ನಡ ಚಿತ್ರರಂಗ ಚೆನ್ನಾಗಿದೆ. ಸಿನಿಮಾಗಳೂ ಚೆನ್ನಾಗಿ ಓಡುತ್ತಿವೆ. ಟೀವಿ ರಿಯಾಲಿಟಿ ಷೋಗಳಲ್ಲಿ ಹೀರೋ–ಹೀರೋಯಿನ್‌ಗಳು ಭಾಗವಹಿಸುತ್ತಿರುವುದು ಚರ್ಚೆ ಮಾಡುವಂತಹ ಸಮಸ್ಯೆಯೇ ಅಲ್ಲ... ಯಾರೋ ಕೆಲಸ ಇಲ್ಲದವರು ಸುಮ್ಮನೆ ವಾಣಿಜ್ಯ ಮಂಡಳಿಯಲ್ಲಿ ಕುಳಿತು ಇದರ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ...'

–ಇದು ನಟ ಶಿವರಾಜ್ ಕುಮಾರ್ ಅವರ ಖಡಕ್ ನುಡಿ.

'ಕನ್ನಡದ ಪ್ರಮುಖ ಹೀರೊ– ಹೀರೋಯಿನ್‌ಗಳು ಟೀವಿ ರಿಯಾಲಿಟಿ ಷೋಗಳಲ್ಲಿ ಭಾಗವಹಿಸುವುದರಿಂದ ಉದ್ಯಮಕ್ಕೆ ಹೊಡೆತ ಬಿದ್ದಿದೆಯಂತಲ್ಲ? ನಿರ್ಮಾಪಕರು ನಷ್ಟದಲ್ಲಿದ್ದಾರಂತಲ್ಲ? ನಿಮ್ಮನ್ನು ಯಾರಾದರೂ ಈ ಬಗ್ಗೆ ಚರ್ಚಿಸಲು ಸಂಪರ್ಕಿಸಿದ್ದಾರಾ?' ಎಂದು ಪ್ರಶ್ನಿಸಿದಾಗ, ಶಿವಣ್ಣ ಸ್ವಲ್ಪ ಭಾವುಕರಾಗಿಯೇ ಉತ್ತರಿಸಿದರು.

'ಯಾವ ನಿರ್ಮಾಪಕರಿಗೆ ತೊಂದರೆ ಆಗಿದೆ? ರೆಗ್ಯುಲರ್ ಆಗಿ ಸಿನಿಮಾ ನಿರ್ಮಿಸುತ್ತಿರುವ ನಿರ್ಮಾಪಕರು ಯಾರಾದರೂ ಈ ಬಗ್ಗೆ ದೂರುತ್ತಿದ್ದಾರಾ? ನಾನು, ಸುದೀಪ್, ಪುನೀತ್, ರಮೇಶ್, ಗಣೇಶ್ ಎಲ್ಲರೂ ಸಿನಿಮಾ ಮಾಡುತ್ತಿದ್ದೇವೆ. ಎಲ್ಲರೂ ವೃತ್ತಿಪರರು. ನಿರ್ಮಾಪಕರಿಗೆ ಯಾವ ತೊಂದರೆಯನ್ನೂ ಕೊಟ್ಟಿಲ್ಲ. ಸುಮ್ಮನೆ ಇಲ್ಲದ್ದನ್ನು ಸೃಷ್ಟಿಸಿ ಸಮಸ್ಯೆ ಉಂಟು ಮಾಡಬೇಡಿ' ಎಂದರು ಶಿವಣ್ಣ.

'ಟೀವಿ ರಿಯಾಲಿಟಿ ಷೋಗಳಲ್ಲಿ ಶೂಟಿಂಗ್ ವಾರದಲ್ಲಿ ಒಂದೋ, ಎರಡೋ ದಿನ ನಡೆಯುತ್ತದೆ. ಒಂದು ದಿನ ರಜೆ ಬೇರೆ ಇರುತ್ತದೆ. ದಿನಾ ಶೂಟಿಂಗ್ ಮಾಡುವವರೂ ಒಪ್ಪಿಕೊಂಡ ಸಿನಿಮಾಗಳಿಗೆ ತೊಂದರೆ ಕೊಟ್ಟಿಲ್ಲ. ಈಗ ಈ ಇಶ್ಯೂ ಎತ್ತಿದವರು ಯಾವ ಸಿನಿಮಾ ಮಾಡುತ್ತಿದ್ದಾರೆ? ಉದ್ಯಮದಲ್ಲಿ ಚರ್ಚಿಸಲು ಬೇರೆ ಬೇಕಾದಷ್ಟು ಸಮಸ್ಯೆಗಳಿವೆ. ಮಲ್ಟಿಪ್ಲೆಕ್ಸ್ ಗಳಲ್ಲಿ ಚೆನ್ನಾಗಿ ಓಡುವ ಕನ್ನಡ ಸಿನಿಮಾಗಳನ್ನು ಅರ್ಧದಲ್ಲೇ ಬದಲಾಯಿಸ್ತಾರೆ. ಕನ್ನಡ ಸಿನಿಮಾಗಳಿಗೆ ಪ್ರೈಮ್‌ಟೈಮ್ ಕೊಡೋದಿಲ್ಲ. ವಾಣಿಜ್ಯ ಮಂಡಳಿಯವರು ಅಂತಹ ಸಮಸ್ಯೆಗಳನ್ನು ಬಗೆಹರಿಸಲು ಹೋರಾಡಲಿ. ಅದು ಬಿಟ್ಟು ಸಮಸ್ಯೆಯೇ ಅಲ್ಲದ ಹೊಸ ಸಮಸ್ಯೆಗಳನ್ನು ಸೃಷ್ಟಿಸುವುದು ಬೇಡ. ಮಂಡಳಿ ಪದಾಧಿಕಾರಿಗಳು ಸ್ವಲ್ಪ ಸೆನ್ಸಿಬಲ್ ಆಗಿ ಬಿಹೇವ್ ಮಾಡಬೇಕು' ಎನ್ನುವುದು ಶಿವಣ್ಣ ಸಲಹೆ.

'ಟೀವಿ ರಿಯಾಲಿಟಿ ಷೋಗಳಿಂದ ನಿರ್ಮಾಪಕರೂ ಲಾಭ ಮಾಡಿಕೊಂಡಿದ್ದಾರೆ, ಉದ್ಯಮಕ್ಕೂ ಲಾಭವಿದೆ. ಎಷ್ಟೊಂದು ನಿರ್ಮಾಪಕರು ರಿಯಾಲಿಟಿ ಷೋಗಳಲ್ಲಿ ಹೋಗಿ ಕುಳಿತು ತಮ್ಮ ಚಿತ್ರಗಳ ಪ್ರಚಾರ ಮಾಡಿಲ್ಲ? ಸಿನಿಮಾ ಪ್ರಮೋಷನ್‌ಗೆ ಷೋಗಳನ್ನು ಬಳಸಿಕೊಂಡಿಲ್ಲ? ಜತೆಗೆ ರಿಯಾಲಿಟಿ ಷೋಗಳಲ್ಲಿ ಹೊಸ ಪ್ರತಿಭೆಗಳು ಬೆಳಕಿಗೆ ಬರುತ್ತಿವೆ. ಹೊಸ ನಟ– ನಟಿಯರು, ಕೊರಿಯೊಗ್ರಾಫರ್ಸ್, ತಂತ್ರಜ್ಞರು ಬರ್ತಾರೆ. ಇದರಿಂದ ಉದ್ಯಮ ಬೆಳೆಯುತ್ತದೆ' ಎಂದರು ಶಿರಾಜ್‌ಕುಮಾರ್.

ಎನ್ನುವುದು ಕುತೂಹಲಕರ. 'ನಾನು ಸಿನಿಮಾಗಳಲ್ಲಿ ನಟಿಸ್ತೀನಿ ಮತ್ತು ಟೀವಿ ಷೋಗಳನ್ನು ನಡೆಸಿಕೊಡುತ್ತೇನೆ. ಇದೆಲ್ಲ ನನಗೆ ಗೊತ್ತಿರುವ ಕೆಲಸಗಳು. ಒಲಿಂಪಿಕ್ಸ್‌ನಲ್ಲಿ ಹೈಜಂಪ್ ಮಾಡು, ಓಟದಲ್ಲಿ ಭಾಗವಹಿಸು ಅಂದರೆ ಅದೆಲ್ಲ ನನಗೆ ಗೊತ್ತಿಲ್ಲದ ಕೆಲಸಗಳು. ನನಗೆ ಗೊತ್ತಿರುವ ಕೆಲಸಗಳಿಗೆ ಸಿಕ್ಕಿದ ಅವಕಾಶಗಳನ್ನು ಬಳಸಿಕೊಳ್ಳುತ್ತಿದ್ದೇನೆ. ವೀಕೆಂಡ್ ವಿದ್ ರಮೇಶ್ ರಿಯಾಲಿಟಿ ಷೋಅನ್ನು ನಾನೂ ಎಂಜಾಯ್ ಮಾಡಿದ್ದೇನೆ, ಜನರೂ ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಈಗ ಅದರ ಸೀಸನ್–3 ಕೂಡಾ ಮಾಡುವ ನಿರ್ಧಾರ ಆಗಿದೆ. ರಿಯಾಲಿಟಿ ಷೋಗಳಿಂದ ಸಿನಿಮಾಗಳು ಓಡುತ್ತಿಲ್ಲ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸತ್ಯ ಎನ್ನುವುದು ನನಗೆ ಗೊತ್ತಿಲ್ಲ. ಎಷ್ಟೊಂದು ಚಾನೆಲ್‌ಗಳಿವೆ. 200ಕ್ಕೂ ಹೆಚ್ಚು ಚಾನೆಲ್‌ಗಳು ಇರುವಾಗಲೂ ಕೂಡಾ ಕೆಲವು ಸಿನಿಮಾಗಳು 100 ಕೋಟಿ, 200 ಕೋಟಿ ರೂಪಾಯಿಗಳನ್ನು ಗಳಿಸಿದ್ದರ ಬಗ್ಗೆ ನಾವು ಕೇಳಿದ್ದೇವೆ. ಸ್ಪರ್ಧೆ ಅನ್ನುವುದು ಈ ತರಹ ಕ್ರಿಯೇಟಿವ್ ಫೀಲ್ಡ್‌ನಲ್ಲಿ ಅನಿವಾರ್ಯ. ಅದನ್ನು ನಾವು ಎದುರಿಸಬೇಕಾಗುತ್ತದೆ' ಎನ್ನುತ್ತಾರೆ ರಮೇಶ್.

'ಟೀವಿ ಚಾನೆಲ್‌ಗಳವರು ಇತ್ತೀಚೆಗೆ ಹಿಂದಿನಂತೆ ಕನ್ನಡ ಸಿನಿಮಾಗಳನ್ನು ಖರೀದಿಸುತ್ತಿಲ್ಲ ಎನ್ನುವುದಕ್ಕೆ ಚಾನೆಲ್‌ನವರು ಹಲವು ಬಿಸಿನೆಸ್ ಕಾರಣಗಳನ್ನು ಕೊಡುತ್ತಾರೆ. ಸೆಟಲೈಟ್ ರೈಟ್ಸ್ ಬಗ್ಗೆ ನಿರ್ಮಾಪಕರು ಮತ್ತು ಚಾನೆಲ್‌ನವರು ಕುಳಿತುಕೊಂಡು ಚರ್ಚೆ ಮಾಡಿ ಬಗೆಹರಿಸಿಕೊಳ್ಳಬೇಕು. ಉದಾಹರಣೆಗೆ ನನ್ನ ಹೊಸ 'ಪುಷ್ಪಕ ವಿಮಾನ' ಸಿನಿಮಾವನ್ನು ಝೀ ಟೀವಿಯವರು ಬಹಳ ಒಳ್ಳೆಯ ದರ ಕೊಟ್ಟು ಖರೀದಿಸಿದ್ದಾರೆ. ಹಾಗಾಗಿ ಅವರು ತಗೊಳ್ತಾನೇ ಇಲ್ಲ ಅಂತಾನೂ ನಾನು ಹೇಳೋಕಾಗಲ್ಲ. ಇದು ಒಂದು ಸಮಸ್ಯೆ ಅಂತ ಹೇಳ್ಲಾ ಅಥವಾ ಚರ್ಚೆ ಅಂತ ಹೇಳ್ಲಾ...ಇದು ಕಳೆದ ವರ್ಷವೂ ಪ್ರಸ್ತಾಪವಾಗಿತ್ತು. ನಮಗೆಲ್ಲ ಸಿನಿಮಾಗಳಲ್ಲಿ ಅವಕಾಶ ಕೊಟ್ಟು ಬೆಳೆಸಿದವರು ನಿರ್ಮಾಪಕರು ಎನ್ನುವುದು ನಿಜ. ಅವರ ಸಮಸ್ಯೆಗಳಿಗೆ ನಟರಾದ ನಾವೂ ಸ್ಪಂದಿಸಬೇಕಾಗುತ್ತೆ. ಆದರೆ ಅದೇನಿದ್ದರೂ ಚರ್ಚೆಯ ಮೂಲಕ ನಡೆಯಬೇಕು. ಯಾರ ಮೇಲೆ ಯಾರೂ ಏನನ್ನೂ ಹೇರೋಕ್ಕಾಗಲ್ಲ' ಎನ್ನುವುದು ರಮೇಶ್ ಅವರ ಅನ್ನಿಸಿಕೆ.

## ಪ್ರಿಯಾಮಣಿ ಪ್ರಶ್ನೆ

'ನೀವು ಟೀವಿಯ ಷೋಗಳಲ್ಲಿ ಭಾಗವಹಿಸಬಾರದು ಎಂದು ಯಾರಾದರೂ ನಿರ್ಮಾಪಕರು ಹೇಳಿದರೆ ಅದನ್ನು ನಾನಂತೂ ಒಪ್ಪುವುದಿಲ್ಲ. ಅದು ನಟ–ನಟಿಯರ ಇಷ್ಟ. ಈಗಂತೂ ಟೀವಿ ರಿಯಾಲಿಟಿ ಷೋಗಳು ಎಷ್ಟೊಂದು ಜನಪ್ರಿಯವಾಗಿವೆಯೆಂದರೆ ಅವುಗಳು ಟೀವಿ ಗಳ ಜನರನ್ನು ತಲುಪುವ ಸಾಮರ್ಥ್ಯವನ್ನು ಇನ್ನೊಂದು ಮಟ್ಟಕ್ಕೆ ಎತ್ತರಿಸಿವೆ. ಜನರನ್ನು ತಲುಪುವುದೆಂದರೆ ಯಾವುದೇ ನಟ– ನಟಿಗೆ ತುಂಬ ಖುಷಿಯ ಕೆಲಸ. ಅದರ ಬಗ್ಗೆ ನಿರ್ಮಾಪಕರು ತಕರಾರು ಎತ್ತಲು ಅವರಿಗೇನು ಹಕ್ಕಿದೆ?' ಎಂದು ಖಾರವಾಗಿ ಪ್ರಶ್ನಿಸುತ್ತಾರೆ ಪ್ರಿಯಾಮಣಿ.

ಪ್ರಿಯಾಮಣಿಯ ಮಾತಿಗೆ ತುಂಬ ಮಹತ್ವವಿದೆ. ಏಕೆಂದರೆ ಅವರು ಏಕಕಾಲದಲ್ಲಿ ಸಿನಿಮಾ ಮತ್ತು ಟೀವಿ ರಿಯಾಲಿಟಿ ಷೋ ಎರಡರಲ್ಲೂ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿರುವ ನಟಿ. ಟೀವಿಯ ಜನಪ್ರಿಯ ಡ್ಯಾನ್ಸ್ ಷೋನಲ್ಲಿ ತೀರ್ಪುಗಾರರಾಗಿ ಕುಳಿತಿರುವ ಪ್ರಿಯಾಮಣಿ ಅವರ ಹೊಸ ಸಿನಿಮಾ 'ದನ ಕಾಯೋನು' ಭರ್ಜರಿ ಪ್ರದರ್ಶನ ಕಾಣುತ್ತಿದೆ. ಸಿನಿಮಾ ಮತ್ತು ಟೀವಿ ರಿಯಾಲಿಟಿ ಷೋ ಎರಡನ್ನೂ ಸಮನಾಗಿ ತೂಗಿಸಿಕೊಂಡು ಹೋಗುತ್ತಿರುವವರು ಅವರು.

'ಟೀವಿಗಳ ಮೂಲಕ ನಾವು ಹೆಚ್ಚು ಪ್ರೇಕ್ಷಕರನ್ನು ತಲುಪಲು ಸಾಧ್ಯವಾಗುತ್ತಿದೆ. ಇದು ನಮ್ಮ ಸಿನಿಮಾಗಳಿಗೂ ನೆರವಾಗುತ್ತದೆ. ಎಷ್ಟೋ ಮಂದಿ ಸಿನಿಮಾ ನಿರ್ಮಾಪಕರೂ ದುಂಬಾಲು ಬಿದ್ದು ರಿಯಾಲಿಟಿ ಷೋಗಳಲ್ಲಿ ಬಂದು ಕುಳಿತು ತಮ್ಮ ಹೊಸ ಸಿನಿಮಾಗಳನ್ನು ಪ್ರಮೋಟ್ ಮಾಡುತ್ತಿಲ್ಲವೆ? ನಾವು ಹೀರೊ ಹೀರೋಯಿನ್‌ಗಳ ರಿಯಾಲಿಟಿ ಷೋಗಳಲ್ಲಿ ಭಾಗವಹಿಸಬಾರದು ಎಂದು ಹೇಳಲು ಇವರಿಗೇನು ಹಕ್ಕಿದೆ?' ಎನ್ನುವುದು ಅವರ ತರ್ಕಬದ್ಧ ಪ್ರಶ್ನೆ.

'ಒಪ್ಪಿಕೊಂಡ ಸಿನಿಮಾಗಳ ಕಾಲ್‌ಶೀಟ್ ಮತ್ತು ರಿಯಾಲಿಟಿ ಷೋ ಕೆಲಸಗಳನ್ನು ಯಾವುದೇ ನಟ– ನಟಿ ಬ್ಯಾಲನ್ಸ್ ಮಾಡಿಕೊಂಡು